**ಒ.ಎಸ್.ನಂಬ್ರ: 75/2022 ಪಿ.ಡಬ್ಲ್ಯೂ : 1**

ದಿನಾಂಕ: 11-06-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

**ಪಾಟಿ ಸವಾಲು: ಪ್ರತಿವಾದಿ ಪರ ವಕೀಲರಾದ ಶ್ರೀ ಆರ್.ಎಸ್. ರವರಿಂದ**

ಸಾವಿತ್ರಮ್ಮ ರವರನ್ನು ನಾನು ನೋಡಿರುವುದಿಲ್ಲ. ಸಾವಿತ್ರಮ್ಮ ರವರು ಬೀಜಾಡಿ ಗ್ರಾಮದವರು . ಸಾವಿತ್ರಮ್ಮ ರವರ ಗಂಡನ ಮನೆಗೆ ಒಂದುಬಾರಿ ಹೋಗಿರುತ್ತೇನೆ. ಸಾವಿತ್ರಮ್ಮರವರರಿಗೆ ಎಷ್ಟು ಜನ ಮಕ್ಕಳೆಂದು ಗೊತ್ತಿಲ್ಲ. ನನ್ನ ತಂದೆಯ ಹೆಸರು ಅನಂತ ಗಾಣಿಗ . ದಾವಾ ಸ್ವತ್ತಿಗೆ ನನ್ನ ತಂದೆ ಚಾಲಗೇಣಿದಾರರು ಆಗಿದ್ದರು. ನಮ್ಮ ತಂದೆಯವರು ಯಾರಿಂದ ದಾವಾ ಸ್ವತ್ತನ್ನು ಚಾಲಗೇಣಿ ಪಡೆದಿರುತ್ತಾರೆಂದು ಗೊತ್ತಿಲ್ಲ. ದಾವಾ ಸ್ವತ್ತನ್ನು ನನ್ನ ಅಣ್ಣ ಖರೀದಿ ಮಾಡಿರುತ್ತಾರೆ. ನನ್ನ ಅಣ್ಣನ ಹೆಸರು ಗೋಪಾಲ ಗಾಣಿಗ. ನನ್ನ ಅಣ್ಣ 27-08-1974 ರಲ್ಲಿ ಖರೀದಿ ಮಾಡಿರುತ್ತಾರೆ. ನನ್ನ ತಂದೆ ಚಾಲಗೇಣಿದಾರರಾಗಿದ್ದ ಆಸ್ತಿಯನ್ನು ನನ್ನ ಅಣ್ಣ ಖರೀದಿ ಮಾಡಿದ್ದರು. ಮೂಲ ಕ್ರಯಪತ್ರ ನನ್ನ ಬಳಿ ಇದೆ. ನಿಪಿ-1 ರ ನ್ಯಾಯಾಲಯದ ಮುಂದಿರುವ ದಾಖಲೆ ದೃಢೀಕೃತ ಪ್ರತಿ ಎಂದರೆ ಸರಿ . ಮೂಲ ಕ್ರಯಪತ್ರವನ್ನು ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಅಣ್ಣ ಕ್ರಯಮಾಡಿದ ನಂತರ ಖಾತೆ ಬದಲಾವಣೆ ಮಾಡಿರುವುದಿಲ್ಲ. ಖಾತೆ ಬದಲಾವಣೆಗೆ ನಾನು ಅರ್ಜಿ ಸಲ್ಲಿಸಿದ ಬಗ್ಗೆ ನೆನಪಿಲ್ಲ.

ನನ್ನ ಅಣ್ಣ ನನಗೆ ವ್ಯವಸ್ಥಾಪತ್ರವನ್ನು ಮಾಡಿಕೊಡುವ ಸಮಯದಲ್ಲಿ ದಾವಾ ಸ್ವತ್ತು ಸಾವಿತ್ರಮ್ಮ ರವರ ಹೆಸರಿನಲ್ಲಿತ್ತು. ಕೈಬರಹದ ಪಹಣಿ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ಸಾವಿತ್ರಮ್ಮ ರವರ ಹೆಸರಿನಲ್ಲಿರುವಾಗಲೇ ನನ್ನ ಅಣ್ಣ ನನ್ನ ಹೆಸರಿಗೆ ನಿಪಿ-2 ರಂತೆ ವ್ಯವಸ್ಥಾ ಪತ್ರ ಬರೆದುಕೊಟ್ಟಿರುತ್ತಾರೆ. ನಿಪಿ-1 ರ ಕ್ರಯಪತ್ರದಂತೆ ನನ್ನ ಅಣ್ಣ ಸಾವಿತ್ರಮ್ಮ ರವರಿಂದ ಎರಡು ಸ್ವತ್ತನ್ನು ಖರೀದಿ ಮಾಡಿರುತ್ತಾರೆ. ನನ್ನ ಹೆಸರಿಗೆ ನಿಪಿ-2 ರಂತೆ 4 ಆಸ್ತಿಗಳನ್ನು ವ್ಯವಸ್ಥಾಪತ್ರದ ಮೂಲಕ ಮಾಡಿಕೊಟ್ಟಿರುತ್ತಾರೆ. ವ್ಯವಸ್ಥಾ ಪತ್ರ 1976-77 ನೇ ಸಾಲಿನಲ್ಲಿ ಆಗಿರುವುದು ಎಂದರೆ ಸರಿ . ವ್ಯವಸ್ಥಾ ಪತ್ರ ಆದ ನಂತರ ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದೆ. 2012 ರಲ್ಲಿ ನನ್ನ ಹೆಸರಿಗೆ ಖಾತೆ ಬದಲಾವಣೆ ಆಗಿಲ್ಲ ಎಂದು ತಿಳಿದು ಅರ್ಜಿ ಸಲ್ಲಿಸಿರುತ್ತೇನೆ. 2012 ರಲ್ಲಿ ನನಗೆ ತಿಳಿದ ತಕ್ಷಣ ಎ.ಸಿ.ರವರಿಗೆ ಮನವಿ ಸಲ್ಲಿಸಿರುತ್ತೇನೆ. ನಾನು ಎಲ್ಲಾ ಆಸ್ತಿಗಳ ಖಾತೆ ಬದಲಾವಣೆಗಾಗಿ ಅರ್ಜಿ ಕೊಟ್ಟಿದ್ದೆ. ನಿಪಿ-4 ಮತ್ತು 5 ರ ಪಹಣಿಗಳಲ್ಲಿನ ಸ್ವತ್ತಿಗೆ ಎ.ಸಿ. ರವರು ಆದೇಶ ಮಾಡಿದ್ದಾರೆ ಎಂದರೆ ಸರಿ .

ದಾವಾ ಆಸ್ತಿಗೆ ಸಂಬಂಧಿಸಿದಂತೆ 2 ಸ.ನಂಬ್ರ ಇದೆ ಎನ್ನುವ ಕಾರಣಕ್ಕೆ ಎ.ಸಿ ರವರು ಅರ್ಜಿಯನ್ನು ವಜಹಾ ಮಾಡಿರುತ್ತಾರೆ. ಎ.ಸಿ. ರವರ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಎ.ಸಿ.ರವರ ಹಿಂಬರಹ ನನ್ನ ಬಳಿ ಇದೆ, ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. 2015 ರಲ್ಲಿ ಎ.ಸಿ ರವರು ವಜಾಮಾಡಿದ ನಂತರ 2022 ರಲ್ಲಿ ಈ ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿ . ದಾವಾ ಸ್ವತ್ತಿನಲ್ಲಿ ಮಳೆಗಾಲದಲ್ಲಿ ಭತ್ತವನ್ನು, ಬೇಸಿಗೆಯಲ್ಲಿ ಧಾನ್ಯವನ್ನು ಬೆಳೆಯಲಾಗುತ್ತದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಕೃಷಿ ಮಾಡುತಿದ್ದಾರೆ ಎಂದರೆ ಸರಿಯಲ್ಲ. ನಾನು ಬಾಂಬೆಯಲ್ಲಿ ಕ್ಯಾಂಟೀನ್ ನಡೆಸುತಿದ್ದೆ. ನನ್ನ ಹೆಸರಿಗೆ ಇಲ್ಲದ ಕಾರಣ ದಾವಾ ಸ್ವತ್ತಿಗೆ ಕಂದಾಯ ಕಟ್ಟಿರುವುದಿಲ್ಲ. ಸಾವಿತ್ರಮ್ಮರವರ ಜೀವಿತ ಅವಧಿಯಲ್ಲಿ ಅವರು ಕಂದಾಯ ಪಾವತಿಸುತಿದ್ದು , ಅವರ ನಂತರ ಅವರ ವಾರಸುದಾರರು ಕಂದಾಯ ಪಾವತಿಸುತಿದ್ದಾರೆಂದರೆ ಸರಿಯಲ್ಲ.

ದಾವಾ ಸ್ವತ್ತಿನ ಚೆಕ್ಕು ಬಂದಿ ಪೂರ್ವಕ್ಕೆ ನಾರಾಯಣ, ಪಶ್ಚಿಮಕ್ಕೆ ತೋಡು, ದಕ್ಷಿಣಕ್ಕೆ ಬಾಬುರವರ ಸ್ವತ್ತು, ಉತ್ತರಕ್ಕೆ ಪ್ರಭಾಕರ ಮತ್ತು ಆಚಾರಿ ರವರ ಸ್ವತ್ತು ಇರುತ್ತದೆ. ನಿಪಿ-1 ರಲ್ಲಿನ ಸಾವಿತ್ರಮ ಬೇರೆ ಮತ್ತು ದಾವಾ ಸ್ವತ್ತಿಗೆ ಸಂಬಂಧಿಸಿದ ಸಾವಿತ್ರಮ ಬೇರೆ ಎಂದರೆ ಸರಿಯಲ್ಲ. ಮೂಲ ದಾಖಲೆಗಳನ್ನು ಹಾಜರುಪಡಿಸಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ದಾಖಲಿಸಲು ವಕೀಲರಿಗೆ ನಾನು ಮಾಹಿತಿಯನ್ನು ನೀಡಿರುತ್ತೇನೆ. ನನ್ನ ವಾದ ಪತ್ರದಲ್ಲಿ ಸಾವಿತ್ರಮ್ಮರವರು ವೀಲುನಾಮೆ ಮಾಡಿದ್ದಾರೆಂದು ಹೇಳಿದ್ದೇನೆಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಮಾಲೀಕರು ವೆಂಕಟಾಚಲ ಚಾತ್ರರವರ ಹೆಂಡತಿ ಸಾವಿತ್ರಮ್ಮ ಆಗಿದ್ದು ನಿಪಿ-1 ರಲ್ಲಿ ನಮೂದಿಸಿದ ಸಾವಿತ್ರಮ್ಮ ಅಲ್ಲ ಎಂದರೆ ಸರಿಯಲ್ಲ. ನಿಪಿ-1 ರಂತೆ ನನ್ನ ಅಣ್ಣನಿಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಪ್ರಾಪ್ತಿಯಾಗಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನಿಗೆ ಹಕ್ಕು ಇಲ್ಲದ ಕಾರಣ ನಿಪಿ-2 ರಂತೆ ನನಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಪ್ರಾಪ್ತಿಯಾಗಿಲ್ಲ ಎಂದರೆ ಸರಿಯಲ್ಲ.

ಸಾವಿತ್ರಮ್ಮರವರು ಪ್ರತಿವಾದಿಗೆ ವೀಲುನಾಮೆಯನ್ನು ದಿಃ01-08-2012 ರಲ್ಲಿ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಿಃ18-06-2013 ರಂದು ಸಾವಿತ್ರಮ್ಮರವರ ಮರಣಾನಂತರ ವೀಲುನಾಮೆ ಜಾರಿಗೆ ಬಂದಿದೆ ಎಂದರೆ ಸರಿಯಲ್ಲ. ವೀಲುನಾಮೆಯ ಆಧಾರದ ಮೇಲೆ ತಹಶೀಲ್ದಾರರು ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಹೇಳಿದಂತೆ ದಾವಾ ಸ್ವತ್ತಿನ ಮಾಲಿಕನಲ್ಲ, ನನಗೆ ಯಾವುದೇ ಹಕ್ಕು ಪ್ರಾಪ್ತಿಯಾಗಿಲ್ಲ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ಕಲ್ಪಿತ ದಾಖಲೆಗಳು ಎಂದರೆ ಸರಿಯಲ್ಲ. ನಾನು ಹೇಳಿದ ಚೆಕ್ಕುಬಂದಿಯಲ್ಲಿ ದಾವಾ ಸ್ವತ್ತು ಬರುವುದಿಲ್ಲ ಎಂದರೆ ಸರಿಯಲ್ಲ. ಬೆಲೆಬಾಳುವ ಪ್ರತಿವಾದಿಗೆ ಸಂಬಂಧಿಸಿದ ಆಸ್ತಿಯನ್ನು ಲಪಟಾಯಿಸಲು ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ಕಾಲ ವಿಳಂಬ ಆಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**